© 2019 IJNRD | Volume 4, Issue 3 March 2019 | ISSN: 2456-4184 | IJNRD.ORG

# ಬಸವಸತಿ ನೀಲಲೋಚನೆ

**ಡಾ. ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
Email: drmrhiremathh@gmail.com

ಶರಣ ಸಮುದಾಯದಲ್ಲಿ ನೀಲಮ್ಮ, ನೀಲಾಂಬಿಕೆ, ನೀಲಲೋಚನೆ ಈ ಹೆಸರುಗಳಿಂದ ಪ್ರಸಿದ್ಧಳಾದ ಬಸವಣ್ಣನವರ ಎರಡನೆಯ ಪತ್ನಿ ಇವಳು. ಮೊದಲನೆಯ ಪತ್ನಿಯಾದ ಗಂಗಾಂಬಿಕೆ ಬಸವಣ್ಣನವರ ಸೋದರ ಮಾವನಾದ ಬಲದೇವನ ಮಗಳೆಂಬುದು ಆರು ಕಾವ್ಯಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಆದರೆ ನೀಲಾಂಬಿಕೆ ಯಾರ ಮಗಳ ಎಂಬ ವಿಷಯವಾಗಿ ಇವಳ ನಿಜನಾಮದ ಕುರಿತಾಗಿ ಕಾವ್ಯಗಳು ಸಂದೇಹ ರೂಪದ ಅಭಿಪ್ರಾಯಗಳನ್ನು ವ್ಯಕ್ತಮಾಡಿವೆ. ಹರಿಹರ ಮತ್ತು ಭೀಮಕವಿ ಗಂಗಾಂಬಿಕೆಯೊಂದಿಗೆ ಮಾಯಿದೇವಿ ಎಂಬ ಹೆಸರನ್ನು ಬಳಸಿರುವುದನ್ನು ನೋಡಿದರೆ ಮಾಯಿದೇವಿಯ ಇನ್ನೊಂದು ಹೆಸರೇ ನೀಲಾಂಬಿಕೆ ಎಂದು ಊಹಿಸಬೇಕಾಗುತ್ತದೆ. ಚಾರಿತ್ರಿಕವಾಗಿ ತುಂಬಾ ಕಡಿಮೆ ಅಂತರದಲ್ಲಿಯೇ ಬಾಳಿ ಬದುಕಿ ಶರಣರ ಜೀವನಕ್ಕೆ ಸಂಬಂಧಿಸಿದ ಐತಿಹಾಸಿಕ ಅಂಶಗಳನ್ನು ತನ್ನ ಕೃತಿಗಳಲ್ಲಿ ದಾಖಲಿಸಿದ ಪ್ರಥಮ ಕವಿಯಾದ ಹರಿಹರ, ಬಸವಣ್ಣನು ಸಿದ್ಧರಸ ಮಂತ್ರಿಯ ಆಸ್ತಿಗೆ ವಾರಸುದಾರನಾದನೆಂದು ಹೇಳುವನಾದರೂ ಈ ಮಾಯಿದೇವಿ ಯಾರ ಮಗಳೆಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಭೀಮಕವಿಯೂ ಈ ವಿಷಯವಾಗಿ ಮೌನತಾಳಿದ್ದಾನೆ. ಲಕ್ಕಣದಂಡೇಶ ಇವಳನ್ನು ಬಿಜ್ಜಳನ ತಂಗಿಯೆಂದು ನೇರವಾಗಿ ಹೇಳಿದರೆ, ವೀರಶೈವಾಮೃತ ಮಹಾಪುರಾಣ ಸಿದ್ಧರಸನ ಮಗಳೆಂದು ಬಾಯಿಬಿಟ್ಟು ಹೇಳುತ್ತದೆ. ಈ ಎರಡೂ ಅಭಿಪ್ರಾಯಗಳನ್ನು ಸಮೀಕರಿಸುವನೇನೋ ಎಂಬಂತೆ ಸಿಂಗಿರಾಜನು ನೀಲಲೋಚನೆ ಸಿದ್ಧರಸನ ಮಗಳು, ಬಿಜ್ಜಳನ ಸಾಕುತಂಗಿ ಎಂದು ಸೂಚಿಸುತ್ತಾನೆ. ಈ ಎಲ್ಲ ಹೇಳಿಕೆಗಳನ್ನು ಕಣ್ಣಮುಂದಿಟ್ಟುಕೊಂಡರೆ, ಇವಳು ಬಿಜ್ಜಳನ ತಂಗಿಯೇ ಆಗಿರುವ ಸಾಧ್ಯತೆಯ ಕಡೆ ಹೆಚ್ಚು ಒತ್ತುಬೀಳುತ್ತದೆ. ಇದಕ್ಕೆ ಪರೋಕ್ಷ ಆಧಾರವೆನ್ನುವಂತೆ ಬ್ರಾಹ್ಮಣ ಯಾದ ಗಂಗಾಂಬಿಕೆಗಿಂತ, ಕ್ಷತ್ರಿಯ ಕನ್ಯೆಯಾದ ನೀಲಾಂಬಿಕೆ ತುಂಬಾ ಪ್ರಭಾವಶಾಲಿಯಾಗಿ ನಮ್ಮ ಸಾಹಿತ್ಯದಲ್ಲಿ ಕಂಡುಬರುತ್ತಾಳೆ.

ಗಂಗಾಬಿಕೆಗೆ ಸಿದ್ಧರಸ ಹೆಸರಿನ ಮಗನಿದ್ದನೆಂದು, ನೀಲಾಂಬಿಕೆಗೆ ಬಾಲಸಂಗಯ್ಯ ಹೆಸರಿನ ಮಗನಿದ್ದನೆಂದು ತಿಳಿದುಬರುತ್ತದೆ. ಇವರಿಬ್ಬರೂ ಸಣ್ಣ ವಯಸ್ಸಿನಲ್ಲಿಯೇ ಮೃತರಾದರೆಂದು ಕಾವ್ಯಗಳು ಸೂಚಿಸುತ್ತವೆ. ಗಂಗಾಂಬಿಕೆ ತನ್ನ ಒಂದು ವಚನದಲ್ಲಿ 'ಅವಳ ಕಂದ ಬಾಲಸಂಗ' ಎಂದು ನುಡಿದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ನೀಲಲೋಚನೆಯ ಜೀವನದ ವಿವರಗಳು ಅಷ್ಟಾಗಿ ನಮಗೆ ತಿಳಿದು ಬರದಿದ್ದರೂ ಬಸವಣ್ಣನ ಬದುಕಿನಲ್ಲಿ ಇವಳ ಪ್ರವೇಶ ಅತಿ ಮುಖ್ಯವಾದುದೆಂದು ವಚನಸಾಹಿತ್ಯ, ಕಾವ್ಯಸಾಹಿತ್ಯಗಳು ಸ್ಪಷ್ಟಪಡಿಸುತ್ತವೆ. ಸಾಮಾಜಿಕ ಸುಧಾರಣೆಯ, ಧಾರ್ಮಿಕ ಜಾಗ್ರತಿಯ ಮಹಾ ಮಣಿಹವನ್ನು ಹೊತ್ತ ಬಸವಣ್ಣನಿಗೆ ಹಿನ್ನೆಲೆ ಮುನ್ನೆಲೆಯಾಗಿ ದುಡಿದ ಇವಳು ಅವನ ಜೀವನಪಥದಲ್ಲಿ ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿ ಹೆಜ್ಜೆ ಹಾಕಿದ್ದಾಳೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಇವಳು ತಂಗಡಿಗಿಯಲ್ಲಿ ಐಕ್ಯಳಾದಳೆಂದು ಪ್ರತೀತಿಯಿದೆ.

ಬಸವಣ್ಣನ ಬದುಕಿನಲ್ಲಿ ಬಹುದೊಡ್ಡ ಪಾತ್ರವಾಡಿದ ನೀಲಾಂಬಿಕೆ 'ಸಂಗಯ್ಯ' ಅಂಕಿತದಲ್ಲಿ ವಚನ, ಸ್ವರವಚನ, ಕಾಲಜ್ಞಾನಗಳನ್ನು ಬರೆದಿದ್ದಾಳೆ. ಈಗ ೨೮೭ವಚನಗಳು ಲಭ್ಯವಾಗಿವೆ. ಸಾಮಾನ್ಯವಾಗಿ ಎಲ್ಲ ವಚನಗಳೂ ಬಸವಣ್ಣನ ಸ್ತುತಿ ಮತ್ತು ಆತನ ಅಗಲಿಕೆಯನ್ನು ಧ್ವನಿಸುತ್ತವೆ. 'ಏಕೆನ್ನ ಪುಟ್ಟಿಸಿದೆಯಯ್ಯ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ' ಎಂಬಂಥ ಮಾತುಗಳು ಅವಳ ನೋವನ್ನು ವ್ಯಕ್ತಪಡಿಸಿದರೆ, 'ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇಕಯ್ಯ' ಎಂಬಂಥ ಮಾತುಗಳು ಅವಳ ಲಿಂಗೈಕ್ಯ ಪ್ರಸಂಗವನ್ನು ನೆನಪಿಸುತ್ತವೆ. 'ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದೆನಯ್ಯ' ಎಂಬುದು ಬಹಳ

ದೊಡ್ಡ ಮಾತು. ಹೆಂಡತಿ ಗಂಡನಿಗೆ ವಿಚಾರಪತ್ನಿಯಾಗಬೇಕು ಎಂಬ ಇದು ಜಾಗತಿಕ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಅಭಿಪ್ರಾಯವಾಗಿದೆ. ಇವಳ ವಚನಗಳಲ್ಲಿ ಬರುವ 'ಮಾತಿನ ಹಂಗೇತಕ್ಕೆ ಮನವೇಕಾಂತದಲ್ಲಿ ನಿಂದಬಳಿಕ' ಎಂಬಂಥ ವಾಕ್ಯಗಳು ಇವಳ ಅನುಭಾವದ ಎತ್ತರವನ್ನು, ಅಭಿವ್ಯಕ್ತಿಯ ಬಿತ್ತರವನ್ನು ಎತ್ತಿ ತೋರಿಸುತ್ತವೆ. ಹೀಗೆ ಕಲ್ಯಾಣದ ಆಂದೋಲನದಲ್ಲಿ ಸಕ್ರಿಯವಾಗಿ ಪಾತ್ರವಹಿಸಿ, ವಚನರಚನೆಯಲ್ಲಿ ನೇರವಾಗಿ ತೊಡಗಿಕೊಂಡ ನೀಲಲೋಚನೆ ಕರ್ನಾಟಕದ ಸ್ತ್ರೀ ಪರಂಪರೆಯಲ್ಲಿಯೇ ಎದ್ದು ಕಾಣುವ ವ್ಯಕ್ತಿ ಎನಿಸಿದ್ದಾಳೆ.

ಬಸವಣ್ಣನವರು ತಮ್ಮ ಜೀವನವನ್ನು ವ್ಯವಸ್ಥಿತವಾಗಿ ರೂಪಿಸಿಕೊಳ್ಳಲು ಅಲ್ಲಿ ಪ್ರವೇಶಿಸಿದ ಇಬ್ಬರು ಮಹಿಳೆಯರ ಪಾತ್ರ ಗಮನಾರ್ಹವಾಗಿದೆ. ಅವರ ಜೀವನದ ಪೂರ್ವಾರ್ಧವನ್ನು ಅಕ್ಕ ನಾಗಲಾಂಬಿಕೆ ರೂಪಿಸಿದರೆ ಉತ್ತರಾರ್ಧವನ್ನು ರೂಪಿಸಿದವಳು ನೀಲಾಂಬಿಕೆಯಾಗಿದ್ದಾಳೆ. ನೀಲಾಂಬಿಕೆ ಬಸವಣ್ಣನವರ ಎರಡನೆಯ ಪತ್ನಿ. (ಮೊದಲನೆಯ ಪತ್ನಿ ಗಂಗಾಂಬಿಕೆ) ನೀಲಮ್ಮ, ನೀಲಾಂಬಿಕೆ, ನೀಲಲೋಚನೆ ಮುಂತಾದ ಹೆಸರುಗಳಿಂದ ಪ್ರಸಿದ್ಧಳಾಗಿದ್ದಾಳೆ. ವೀರಶೈವ ಕವಿಗಳಾದ ಹರಿಹರ ಹಾಗೂ ಭೀಮಕವಿಯ ನೀಲಾಂಬಿಕೆಯನ್ನು 'ಮಾಯಿದೇವಿ' ಎಂದು ಕರೆದಿದ್ದಾರೆ. ಬಹುಶಃ ಈಕೆಯ ಮೂಲನಾಮ 'ಮಾಯಿದೇವಿ' ಆಗಿದ್ದು ನೀಲಲೋಚನೆ, ನೀಲಾಂಬಿಕೆ ಅನ್ವರ್ಥವಾಗಿರಬೇಕೆನಿಸುತ್ತದೆ.

ಬಸವಣ್ಣನವರ ಬದುಕಿನಲ್ಲಿ ನೀಲಾಂಬಿಕೆಯ ಪ್ರವೇಶ ಅತ್ಯಂತ ಮುಖ್ಯವಾದುದು. ಕ್ಷತ್ರಿಯ ಕನ್ಯೆ ಬಿಜ್ಜಳ ಮಹಾರಾಜನ ಸಾಕು ತಂಗಿಯಾದ ನೀಲಾಂಬಿಕೆಯು ಸಾಮಾಜಿಕ ಸುಧಾರಣೆಯ, ಧಾರ್ಮಿಕ ಜಾಗೃತಿಯ ಮಹಾಮಣಿಹವನ್ನು ಹೊತ್ತು ಪತಿ ಬಸವಣ್ಣನವರಿಗೆ ಹಿನ್ನೆಲೆ-ಮುನ್ನಲೆಯಾಗಿ ದುಡಿದು, ಪತಿಯ ಜೀವನ ಮಾರ್ಗದಲ್ಲಿ ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿ ಹೆಜ್ಜೆ ಹಾಕಿ, ಅಪಾರ ಧೈರ್ಯ, ಸಾಹಸ, ಕೆಚ್ಚೆದೆಯನ್ನು ತೋರಿದವಳು. ತನ್ನ ಕ್ರಿಯಾಶೀಲ ವ್ಯಕ್ತಿತ್ವದಿಂದ ಇತರರ ಮೇಲೆ ತುಂಬಾ ಪ್ರಭಾವ ಬೀರಿದವಳು. ನೀಲಾಂಬಿಕೆಯ ಜೀವನದಲ್ಲಿ ನಡೆದಿರಬಹುದಾದ ಮೂರು ಮುಖ್ಯ ಘಟನೆಗಳು, ಆಕೆಯ ದಾಂಪತ್ಯದಲ್ಲಿ ಇದ್ದ ಪತಿ-ಪತ್ನಿ ಸಾಮರಸ್ಯ.

೧. ಬಸವಣ್ಣನವರು ಪೃಥ್ವಿಗಗ್ಗಳ ಚೆಲುವೆಯಾದ ಪತ್ನಿಯ ಸುಂದರ ಕಣ್ಣುಗಳನ್ನು ಕಂಡು ಬರುವ 'ನೀಲಲೋಚನೆ' ಎಂದು ಕರೆದಿರಬಹುದಾಗಿದೆ. ಶರಣಸತಿ-ಲಿಂಗಪತಿ ಭಾವದ ಔನ್ನತ್ಯದ ತೀವ್ರತೆಯನ್ನು ಗುರುತಿಸುವ ಘಟನೆಗಳಾಗಿ ಪರಿಣಮಿಸುತ್ತವೆ. ಒಂದು ದಿನ ರಾತ್ರಿ ಕಳ್ಳನೊಬ್ಬ ಈ ದಂಪತಿಗಳ ಮನೆ ಹೊಕ್ಕು ಮಲಗಿದ್ದ ನೀಲಾಂಬಿಕೆಯ ಕಿವಿಯ ಓಲೆಗೆ ಕೈಹಾಕಲು, ನಿದ್ದೆ ತಿಳಿದೆದ್ದ ಅವಳು ಕಳ್ಳ, ಕಳ್ಳನೆಂದು ಚೀರುತ್ತಾಳೆ. ಆ ದನಿ ಕೇಳಿ ಬಸವಣ್ಣನವರಿಗೆ ಎಚ್ಚರವಾಗುತ್ತದೆ. ಜಾಗೃತ-ಸ್ವಪ್ನ-ಸುಷುಪ್ತಿ ಅವಸ್ಥಾತ್ರಯಗಳಲ್ಲಿಯೂ ಭಕ್ತನನ್ನು ಸಂಗನೆಂದೇ ಕಾಣುವವರು ಬಸವಣ್ಣನವರು. ಆದುದರಿಂದ ಅಂದು ರಾತ್ರಿ ಮನೆಗೆ ಬಂದವನು ಕಳ್ಳನಲ್ಲ, ಭಕ್ತ; ಅವನೇ ಸಂಗಮನಾಥ! ಈ ನಂಬುಗೆಯಿಂಬುಗೊಂಡು, ಅನುಮಾನಿಸಿದ ಹೆಂಡತಿಗೆ, 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದೊಡೆ, ಕೂಡಲಸಂಗಮದೇವನಲ್ಲದೆ ಮತ್ತಾರೂ ಇಲ್ಲ' ಎಂದು ತಿಳಿಹೇಳಿ, ಓಲೆ ಬಿಚ್ಚಿಕೊಡಲು ಆಜ್ಞಾಪಿಸಿದಾಗ, ಎರಡನೆಯ ಮಾತಿಲ್ಲದೆ ನೀಲಾಂಬಿಕೆ ಆಭರಣಗಳನ್ನು ಕಳ್ಳನ ಕೈಗಿಡುತ್ತಾಳೆ. ಇದು ನೀಲಾಂಬಿಕೆಯ ಸಾಧನೆಯ ಮೊದಲ ಹಂತದಲ್ಲಿ ಇರಬಹುದಾದ ಮಾನಸಿಕ ದ್ವಂದ್ವದ ಘಟನೆ. ಪತಿಭಕ್ತೆ ನೀಲಾಂಬಿಕೆ ಬಸವಣ್ಣನವರ ಅಣತಿಯಂತೆಯೇ ನಡೆದು ಅಂತಹ – ಅರಕೆಗಳನ್ನು ತುಂಬಿಕೊಳ್ಳುವ ಅನಂತರದ ಘಟನೆ ಇನ್ನೂ ರೋಚಕವಾದುದು.

೨. ವಿಟ ಜಂಗಮರೂಪಿ ಶಿವನಿಗೆ ನೀಲಾಂಬಿಕೆಯನ್ನು ನೀಡಿದ ಸನ್ನಿವೇಶದ ವಚನವು ಬಸವಣ್ಣನವರ ಹೆಚ್ಚಿನ ವಚನಗಳಲ್ಲಿ ದೊರೆಯುತ್ತದೆ. ನೀಲಾಂಬಿಕೆಯು ಊರೊಳಗೆ ಹೆಣ್ಣಿಲ್ಲದಿರ್ದಡೆ ಬಸವನು ನನ್ನ ಕೊಟ್ಟಲ್ಲದೆ ಬಿಡಲಾರನೆಂದು ಸಿಂಗರಿಸಿಕೊಂಡು, ಬಸವನ ಬರವನ್ನು ಕಾಯುತ್ತಿದ್ದ ಸಮಯದಲ್ಲಿ ವಿಟ ಜಂಗಮನಿಗೆ ಅಂದು ಹೆಣ್ಣು ಪೂರೈಸಲಾರದೆ ವಿಫಲನಾದ ಚಿಂತೆಯಲ್ಲಿ ಬಸವಣ್ಣನವರು ಮನೆಗೆ ಬಂದಾಗ, ನೀಲಾಂಬಿಕೆ ಬಸವನಡೆಗೆ ಪ್ರವೇಶಿಸುತ್ತಾಳೆ. ಅಂದು ಬಸವಣ್ಣನವರ ಆದೇಶಕ್ಕನುಗುಣವಾಗಿ ನಿನ್ನ ಮನೋರಥವನ್ನು ಈಡೇರಿಸುವೆನೆನ್ನುತ್ತಾಳೆ; ಸಜ್ಜೆ ಮನೆಯನ್ನು ಇಂದು ಅವರ ಆಭರಣಗಳನ್ನು ಕಳಚಿಕೊಟ್ಟ ನೀಲಾಂಬಿಕೆ

ಅಂತರಂಗವನ್ನರಿತವಳಾಗಿ ಅವರ ಆಜ್ಞೆಯ ಮೊದಲೆ ತನ್ನನ್ನು ಅರ್ಪಿಸಿಕೊಳ್ಳಲು ಅಣಿಯಾದ ಈ ಸನ್ನಿವೇಶವು ನೀಲಾಂಬಿಕೆ ಕ್ರಮಿಸುತ್ತಿರುವ ಸಾಧನೆಯನ್ನು ಸ್ಪಷ್ಟ ಪಡಿಸುತ್ತದೆ. ಬಸವಣ್ಣನವರ ಜಂಗಮಭಕ್ತಿ, ನೀಲಾಂಬಿಕೆಯ ಪತಿ ಭಕ್ತಿಗೆ ಮೆಚ್ಚಿದ ಶಿವನು ತನ್ನ ವಿಟ ಜಂಗಮ ವೇಷ ಸರಿಸಿ, ಕೋಟಿ ರವಿ ತೇಜದಿಂದ ಹೊಳೆಯಲು, ನೀಲಾಂಬಿಕೆಯು 'ಬಸವಾ ಬಸವಾ ಜಂಗಮದೇವರು ಸಂಗಮದೇವರಾದರು' ಎಂದಾಗ, 'ತಾಯೆ, ತಾಯೆ ಮುನ್ನವಾರೆಂದು ಕೊಟ್ಟೆ' ಎಂದು ನುಡಿಯುತ್ತಿರುವಂತೆಯೇ ಭಕ್ತನ ಮುಂದೆ ಸಂಗಮನಾಥನು ಸೋತು ಹೋಗುತ್ತಾನೆ. ಈ ಘಟನೆಗೆ ಆಧಾರವೆನ್ನುವಂತೆ ನೀಲಾಂಬಿಕೆಯು,

“ಮಡದಿ ಎನ್ನಲಾಗದು ಬಸವಂಗೆ
ಎನ್ನನು ಪುರುಷನೆನ್ನಲಾಗದು ಬಸವನ ಎನಗೆ,
ಉಭಯದ ಕುಳವ ಹರಿದು ಬಸವಂಗೆ
ಶಿಶುವಾನಾದೆನು ಬಸವನನ್ನ ಶಿಶುವಾದನು.
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರದೆ ಬಸವನೊಳಗಾನಡಗಿದೆ”[೧]

ಎನ್ನುವ ಈ ವಚನ ಹೀಗೆ ನಡೆದಿರಬಹುದಾದ ಘಟನೆಗೆ ಕನ್ನಡಿ ಹಿಡಿಯುತ್ತದೆ. ಕವಿ ಹರಿಹರನೂ ಈ ಘಟನೆಯನ್ನು ಪ್ರಸ್ತಾಪಿಸುತ್ತಾನೆ. ಅಲ್ಲದೆ ಈ ಘಟನೆಯ ನಂತರ ಗಂಡ ಹೆಂಡತಿಯ ಸಂಬಂಧ ಸಂಪೂರ್ಣವಾಗಿ ನಿಂತು ಹೋಗಿ, ದೈವೀ ಸಂಬಂಧ ಏರ್ಪಟ್ಟಿರುವುದು ಸ್ಪಷ್ಟವಾಗುತ್ತದೆ.

೩. ನೀಲಾಂಬಿಕೆಯ ಜೀವನದ ಕೊನೆಯ ಗಳಿಗೆಯಲ್ಲಿ ನಡೆದಿರಬಹುದಾದ ಘಟನೆಯೊಂದು ಆಕೆಯ ಆತ್ಮಸಾಕ್ಷಾತ್ಕಾರದ ಪರಮಸಿದ್ಧಿಯ ಹೆಗ್ಗುರುತೆನ್ನಬೇಕು. 'ನೋಡು, ನೋಡು, ನೋಡು ನೋಡು ಲಿಂಗವೇ” ಎಂಬ ಆಕೆಯ ಇಷ್ಟಲಿಂಗೈಕ್ಯ ಗೀತೆಯು ಒಂದರ್ಥದಲ್ಲಿ ಹಂಸಗೀತೆಯಾಗಿದೆ. ಈ ಪದ್ಯವನ್ನು ಕುರಿತಂತೆ ಎಂ.ಎಂ. ಕಲಬುರ್ಗಿಯವರು “ಕನ್ನಡ ಸಾಹಿತ್ಯದ ಕೆಲವೇ ಶ್ರೇಷ್ಠ ಗೀತೆಗಳಲ್ಲಿ ಒಂದಾದ ಇದು ಸ್ವರವಚನ ಸಾಹಿತ್ಯ ಭಂಡಾರದ ಅನರ್ಘ್ಯರತ್ನ”[೨] ಎಂದಿರುವುದು ಗಮನಾರ್ಹ. ಪತಿ ಬಸವಣ್ಣನವರು ಕೂಡಲಸಂಗಮದಲ್ಲಿ ಲಿಂಗೈಕ್ಯವಾಗುವ ಸಂದರ್ಭ. ಪ್ರಯಾಣದಲ್ಲಿ ಇನ್ನೂ ಹಿಂದೆ ಉಳಿದಿದ್ದ ಹೆಂಡತಿ ನೀಲಮ್ಮನನ್ನು ಕರೆತರಲು ಶರಣ ಹಡಪದ ಅಪ್ಪಣ್ಣನನ್ನು ಕಳಿಸುತ್ತಾರೆ. ಲಿಂಗಪೂಜೆಯಲ್ಲಿ ನಿರತಳಾಗಿದ್ದ ನೀಲಮ್ಮಳಿಗೆ ಅಪ್ಪಣ್ಣನು ತಾನು ಬಂದ ಉದ್ದೇಶವನ್ನು ಅರುಹುತ್ತಾನೆ. ಅದನ್ನೇ ನೀಲಮ್ಮ ತನ್ನ ಅಂಗೈಯ ಲಿಂಗಕ್ಕೆ ನಿವೇದಿಸುವುದು ಈ ಪದ್ಯದ ವಸ್ತು. ಈ ಪದ್ಯದಲ್ಲಿ ಬಸವಣ್ಣನ ಕ್ರಿಯೆಗೆ ಆಕೆಯ ಶಕ್ತಿಶಾಲಿಯಾದ ಪ್ರತಿಕ್ರಿಯೆ ಅಭಿವ್ಯಕ್ತವಾಗಿದೆ. ಕರದ ಲಿಂಗದಲ್ಲಿ ಸಂಗ, ಸಂಗನಲ್ಲಿ–ಬಸವನನ್ನು ದೃಷ್ಟಿಸಿದ ನೀಲಮ್ಮನು 'ಅಲ್ಲಿರ್ದ ಸಂಗಯ್ಯನಿಲ್ಲಿಲ್ಲವೆ!' ಎಂದು ವ್ಯಕ್ತಪಡಿಸಿರುವ ಉದ್ಗಾರವು ನೀಲಾಂಬಿಕೆಯ ಉನ್ನತ ಆಧ್ಯಾತ್ಮಿಕ ನಿಲುವಿಗೆ ಸಾಕ್ಷಿಯಾಗಿದೆ.

ಹೀಗೆ ಮೇಲಿನ ಮೂರು ಘಟನೆಗಳನ್ನೊಳಗೊಂಡ ಕಾವ್ಯಗಳು ಮತ್ತು ವಚನಗಳು ನೀಲಾಂಬಿಕೆಯ ದಾಂಪತ್ಯ ಜೀವನದ ಬಹುಮುಖ್ಯವಾದ ತಿರುವುಗಳನ್ನು ಮತ್ತು ಮಾನಸಿಕ ಸಾಧನೆ–ಸಿದ್ಧಿಗಳನ್ನು ಕಟ್ಟಿಕೊಡುತ್ತವೆ. ನೀಲಾಂಬಿಕೆ ಒಬ್ಬ ಶ್ರೇಷ್ಠ ವಚನಕಾರ್ತಿಯಾಗಿದ್ದುದಲ್ಲದೆ ಸುಶ್ರಾವ್ಯವಾಗಿ ಹಾಡಬಲ್ಲ ಹಾಡುಗಾರ್ತಿಯೂ ಆಗಿದ್ದಳೆಂದು ತೋರುತ್ತದೆ. ಆಕೆಯ ೧೨೬ ವಚನಗಳು ಪ್ರಕಟಗೊಂಡಿವೆ. ಅಲ್ಲದೆ ಏಳು ಸ್ವರ ವಚನಗಳು ದೊರೆತಿವೆ. ನೀಲಾಂಬಿಕೆಯ ಹೆಸರಿನಲ್ಲಿ ಒಂದು 'ಕಾಲಜ್ಞಾನ' ಕೃತಿಯೂ ದೊರೆತಿದ್ದು ಕವಿಚರಿತೆಕಾರರು ಸೂಚಿಸಿರುವ 'ಪ್ರಸಾದ ಸಂಪಾದನೆ' ಕೃತಿಯು ಆಕೆಯವಾಗಿರಬಹುದೆಂದು ತೋರುತ್ತದೆ. ನೀಲಾಂಬಿಕೆಯ ವಚನಗಳ ಅಂಕಿತ 'ಸಂಗಯ್ಯ', 'ಸಂಗನಬಸವ', 'ಸಂಗ' ಎಂದಾಗಿದ್ದು, ಪ್ರತಿಯೊಂದು ವಚನದಲ್ಲೂ ಬಸವಣ್ಣನ ಸ್ಮರಣೆ ಹಾಸು ಹೊಕ್ಕಾಗಿದೆ. ಜೊತೆಗೆ ವೀರಶೈವ ಧರ್ಮದ

ಮೂಲತತ್ವಗಳಾದ ಗುರು–ಲಿಂಗ–ಜಂಗಮಗಳ ಪ್ರಸ್ತಾಪ ಶಿವಯೋಗ ಮಹಿಮೆ ಮುಂತಾದವುಗಳು ಅಲ್ಲಲ್ಲಿ ಗೋಚರಿಸುವ ಇತರ ಅಂಶಗಳಾಗಿವೆ.

ಬಸವಣ್ಣನವರ ಮೊದಲ ಪತ್ನಿ ಗಂಗಾಂಬಿಕೆಯ ವಚನಗಳಿಗೂ ನೀಲಾಂಬಿಕೆಯ ವಚನಗಳಿಗೂ ಹೋಲಿಸಿ ನೋಡಿದಾಗ, ಸ್ತ್ರೀ ಸ್ವಾತಂತ್ರ್ಯದ ಅವಕಾಶವನ್ನು ಸಂಪೂರ್ಣವಾಗಿ ಮತ್ತು ಸಮರ್ಥವಾಗಿ ಬಳಸಿಕೊಂಡ ಹಿರಿಮೆ ನೀಲಾಂಬಿಕೆಯದಾಗುತ್ತದೆ. ನೀಲಾಂಬಿಕೆಯು ಪತಿಯ ಸಾನಿಧ್ಯ–ಸಂಪರ್ಕಗಳಲ್ಲಿ ಅನುಭಾವಿಕ ಪ್ರಜ್ಞೆಯ ಗುರಿಯನ್ನು ತಲುಪಿದ ಸಂತಸವು ವಚನಗಳಲ್ಲಿ ಅಚ್ಚೊತ್ತಿ ನಿಂತಿದೆ.

'ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು' (ನೀ.ವ. ೧)
'ಗುರು ಬಸವನನ್ನ ಕಾಯದಲ್ಲಿ ಕಯ್ಯಲಗನಂತಿದ್ದನು' (ನೀ.ವ. ೨)
'ಬರುಕಾಯದ ಭ್ರಮೆಯ ಬಿಡಿಸಿದೆಯಲ್ಲಾ ಬಸವ' (ನೀ.ವ.೧೩)
'ಕೂಟವಿಲ್ಲದ ಪುರುಷನ ಕಂಡು ಕಾಮದ ಆತುರ ಹಿಂಗಿತ್ತನಗೆ'
'ಏನೆಂದೆನ್ನದ ಮುನ್ನ ತಾನೆಯಾಯಿತ್ತು; ಸಂಗಯ್ಯನಲ್ಲಿ ಶಬ್ದಮುಗ್ಧವಾಯಿತ್ತು' (ನೀ.ವ.೨೬)

ಈ ಮುಂತಾದ ವಚನಗಳಲ್ಲಿ ಬಸವೇಶ್ವರರ ವ್ಯಕ್ತಿತ್ವವನ್ನು ಹಾಗೂ ಅಂತಹ ಪತಿಯು ತನಗೆ ಗುರು, ಮಾರ್ಗದರ್ಶಕ, ತಂದೆ, ಮಗ, ದಿವ್ಯ ಶಕ್ತಿ ಎಂಬುದನ್ನು, ನೀಲಾಂಬಿಕೆ ಹಾಡಿ ಹರಿಸಿದ್ದಾಳೆ; ಹಾಗೆಯೇ ದೈಹಿಕ ಕಾಮನೆಗಳನ್ನು ಮರೆತು ದೈವೀ ಪ್ರಜ್ಞೆಯಿಂದ ದಾಂಪತ್ಯವನ್ನು ನಡೆಸಿದ ಅಪರೂಪದ ಮಹಿಳೆ ತಾನು ಎಂಬುದನ್ನು ಸಾಧಿಸಿ ತೋರಿದ್ದಾಳೆ. ಅಂದಿನ ಸಮಾಜದಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲದೆ, ಬದುಕುತ್ತಿದ್ದ ತಿರಸ್ಕೃತ ಹೆಣ್ಣಿನ ಜೀವನದ ಚಿತ್ರ ನೀಲಾಂಬಿಕೆಯ ಒಂದು ವಚನದಲ್ಲಿ ತೋರಿ ಬರುತ್ತದೆ. 'ಏಕೆನ್ನ ಪುಟ್ಟಿಸಿದೆಯಯ್ಯ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ?' 'ನಾನು ಇಹಪರಕ್ಕೆ ದೂರಳಯ್ಯಾ ಎನ್ನ ನಾಮ ಹೆಣ್ಣು ನಾಮವಲ್ಲವಯ್ಯಾ ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ ಎನಗೆ ಹೆಣ್ಣು ನಾಮವಿಲ್ಲವಯ್ಯ.' ಈ ವಚನದ ಪೂರ್ವಾರ್ಧದಲ್ಲಿ ಇಂತಹ ತೊಳಲಾಟದ ಹೆಣ್ಣಿನ ಜೀವನವನ್ನು ಗುರುತಿಸಬಹುದು. ಆದರೆ ವಚನದ ಉತ್ತರಾರ್ಧದಲ್ಲಿ ಶರಣರು ತೋರಿದ ಔದಾರದಿಂದಾಗಿ ಸ್ತ್ರೀ ಧಾರ್ಮಿಕ ಸ್ವಾತಂತ್ರ್ಯವನ್ನು ಪಡೆದು ತನ್ನ ಜೀವನ ಪಾವನ ಮಾಡಿಕೊಳ್ಳುವಂತಾಯ್ತು, ಇಂತಹ ಸ್ಥಿತ್ಯಂತರಕ್ಕೆ ಬಸವಣ್ಣನೇ ಕಾರಣ ಎಂಬ ಕೃತಾರ್ಥಭಾವ, ಹೆಣ್ಣನದ ನಿಕೃಷ್ಟತೆಯನ್ನು ಕಳೆದುಕೊಂಡ ಧೈರ್ಯಭಾವ ಧ್ವನಿತಗೊಂಡಿದೆ. ಸಾಧನಾ ಪಥದಲ್ಲಿ ಮುನ್ನಡೆದ ಭಕ್ತನ ಮನಸ್ಸು ದೃಢಗೊಳ್ಳುತ್ತದೆ. ಯಾವುದೇ ಹೊಯ್ದಾಟ, ಕಳವಳ, ಕಷ್ಟ–ಸುಖ, ಸೋಲು–ಗೆಲುವುಗಳು ಪರಮಾತ್ಮನ ಅಧೀನ ಎಂಬ ತಿಳುವಳಿಕೆ ಚಿತ್ತ ಸ್ಥಿರತೆಯನ್ನು ತಂದುಕೊಡುತ್ತದೆ. ಅದನ್ನು ನೀಲಾಂಬಿಕೆಯು ತನ್ನ ಒಂದು ವಚನದಲ್ಲಿ ಹೀಗೆ ನಿರೂಪಿಸುತ್ತಾಳೆ– 'ಆಗಿಂಗೆ ಮುಯ್ಯಾನದಿರು, ಚೇಗಿಂಗೆ ಬೆಂಬಿಳದಿರು ಆಹಾ ಮನವೆ, ಸಂತೈಸಿಕೊ ನಿನ್ನ ನೀನೆ ಆಗೆಂದಡೆ ನಿನ್ನ ವಶವಲ್ಲ, ಹೋಗೆಂದಡೆ ನಿನ್ನಿಚ್ಛೆಯಲ್ಲ. ಭೋಗಾದಿ ಭೋಗಂಗಳೆಲ್ಲವು ಸಂಗಯ್ಯನಧೀನವಾಗಿ.'

ಬಸವಣ್ಣನವರು 'ಅಂಜಿದಡಾಗದು, ಅಳುಕಿದಡಾಗದು, ವಜ್ರಪಂಜರ ದೊಳಿದ್ದಡಾಗದು, ತಪ್ಪದದೊ ಲಲಾಟಲಿಖಿತ' ಎಂದು ಹೇಳಿದಂತೆ, ನೀಲಾಂಬಿಕೆಯೂ ಅದನ್ನು ಒಪ್ಪಿಕೊಂಡಿದ್ದಾಳೆ. ಸ್ತುತಿ–ನಿಂದೆ, ಸುಖ–ದುಃಖಗಳನ್ನು ಸಮನಾಗಿ ಸ್ವೀಕರಿಸುವ ಸ್ಥಿತ ಪ್ರಜ್ಞತೆ ಇದ್ದಾಗ ಮಾತ್ರ ಪರಮಸಿದ್ಧಿಯ ಗುರಿಯನ್ನು ತಲುಪಲು ಸಾಧ್ಯವೆಂಬುದು ನೀಲಮ್ಮನ ವಚನದ ಇಂಗಿತವಾಗಿದೆ. ನೀಲಾಂಬಿಕೆ ಬಸವಣ್ಣನವರ ಪ್ರೀತಿಯ ಮಡದಿಯೆನಿಸಿ, ಅವರ ಸಾಮಾಜಿಕ ಹೋರಾಟದಲ್ಲಿ ಪಾಲ್ಗೊಂಡು, ಅದರ ಜೊತೆಯಲ್ಲಿಯೇ ತಾನು ಮಾನವೀಯ ಮೌಲ್ಯಗಳನ್ನು ಅರಗಿಸಿಕೊಂಡು ಆಂತರಿಕವಾಗಿ ಬೆಳೆಯುತ್ತ ಅನುಭಾವದ ತುತ್ತತುದಿಯನ್ನು ಏರಿದವಳು. ಅಂತೆಯೇ ನೀಲಾಂಬಿಕೆಯ ದಾಂಪತ್ಯ ಜೀವನ ಅರ್ಥಪೂರ್ಣವಾದುದು, ಅಲೌಕಿಕವಾದುದು. ಆಕೆಯ ಒಂದು ವಚನ ಹೀಗಿದೆ, 'ಪಾರ್ವತಿಯ ರೂಪ ಕಂಡು ಪರಶಿವನ ಸಂಗ ನಿಸ್ಸಂಗವಾಗಿ ತಾಯಿ ಮಗನಂಗದಿಂದ ತನುವಳಿದು ನಿರಾಭಾರ ನಿರಾಭಾರರೂಪವನೆಯ್ದೆ, ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದೆನಯ್ಯಾ ಸಂಗಯ್ಯ' ಇಲ್ಲಿ ದಾಂಪತ್ಯ ಜೀವನವು ಕೊನೆಗೆ ಮುಟ್ಟುವ ಅನುಭಾವದ ಎತ್ತರವನ್ನು ಧ್ವನಿಸುತ್ತದೆ ಮಾತ್ರವಲ್ಲ; 'ಬಸವನ ಅನುಭವದಿಂದ

ವಿವರವ ಕಂಡು ವಿಚಾರಪತ್ನಿಯಾದೆನಯ್ಯ' ಎನ್ನುವುದು ಆಕೆಯ ಅಲೌಕಿಕ ಜ್ಞಾನದ ಅನಂತತೆಯನ್ನು ಎತ್ತಿ ತೋರುತ್ತದೆ. ಹೆಂಡತಿ ಗಂಡನಿಗೆ ವಿಚಾರ ಪತ್ನಿಯಾಗಬೇಕು ಎಂಬ ಮಾತು ಜಾಗತಿಕ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಅಭಿಪ್ರಾಯವಾಗಿದೆ.

ಭಾವಜೀವಿ ನೀಲಾಂಬಿಕೆಯ ಕೆಲವು ವಚನಗಳಲ್ಲಿ ಕರುಣರಸವು ಹೊನಲಾಗಿ ಹರಿದಿದೆ. ತನ್ನ ಕದ್ದೊಳಗಣ ಗೊಂಬೆಯಾಗಿದ್ದ ಪತಿ ಬಸವಣ್ಣನಿಲ್ಲದ ಬದುಕು ಆಕೆಗೆ ಶೂನ್ಯ. ಬಸವಣ್ಣ ಸಂಗಮನಾಥನಲ್ಲಿ ಬಯಲಾದ ವಿಷಯ ತನ್ನ ಕರಸ್ಥಲದ ಲಿಂಗದಲ್ಲಿ ಅರಿತ ನೀಲಮ್ಮ ವ್ಯಕ್ತಪಡಿಸುವ ಅಳಲು ಹೃದಯಸ್ಪರ್ಶಿಯಾದುದು. 'ಅಟ್ಟಡವಿಯಲಿ ಬಿಟ್ಟು ಹೋದಿರಿ ಬಸವಯ್ಯಾ, ನಟ್ಟುನಡು ಗ್ರಾಮವ ಕೆಡಿಸಿ ಹೋದಿರಿ ಬಸವಯ್ಯಾ' ಎಂದು ಪ್ರಲಾಪಿಸುತ್ತ, 'ನಾಡಿನ ಹೆಣ್ಣುಗಳೆಲ್ಲಾ ಬನ್ನಿರೆ ಅಕ್ಕಗಳಿರಾ ಅಕ್ಕನರಸ ಬಸವಯ್ಯನು ಬಯಲ ಕಂಡು ಬಟ್ಟಬಯಲಾದನು. ಅಕ್ಕನರಸನಿಲ್ಲದೆ ನಿರಕ್ಕರನಾದನು ಬಸವಯ್ಯನು ನಮ್ಮ ಸಂಗಯ್ಯನಲ್ಲಿ ಬಸವಯ್ಯನೈಕ್ಯ ಬಯಲಿಲ್ಲದ ಬಯಲು' ಎಂದು ನಿವೇದಿಸಿ ತನ್ನೊಡಲ ದುಃಖವನ್ನು ಹಂಚಿಕೊಳ್ಳಲೆತ್ನಿಸುತ್ತಾಳೆ. ಬಸವಣ್ಣ ಬಯಲಾದ ವಿಷಯವನರಿತು ತಲ್ಲಣಿಸಿದ ಆಕೆಯ ಹೃದಯದಿಂದ ಹೊರಟ ಶೋಕಗೀತೆಗಳೇ ವಚನಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ದೊರೆತಿರುವ ಕಾವ್ಯಗಳಲ್ಲಿ ಇವು ಮೊಟ್ಟ ಮೊದಲ ಶೋಕಗೀತೆಗಳೆಂದು ಗುರುತಿಸಿರುವುದು ಉಚಿತವಾಗಿದೆ.

ಬಸವಣ್ಣನವರು ಸಂಗಮನಾಥನಲ್ಲಿ ಬೆರೆತ ವಿಷಯವನ್ನು ತಿಳಿದ ನೀಲಾಂಬಿಕೆಗೆ ಸಹಿಸಲಸಾಧ್ಯವಾದ ಆಘಾತ! ಸಮಯಕ್ಕೆ ತಂಗಡಗಿಯವರೆಗೆ ಬಂದ ಆಕೆ, 'ಸಂಗಯ್ಯಾ, ಬಸವ ಹೋದನ ನಾನಡಗಿದೆನಯ್ಯ ನಿಮ್ಮತ್ತಲಿ' ಎಂದು ತನ್ನ ಲಿಂಗದಲ್ಲಿ ಐಕ್ಯಹೊಂದಿರಬಹುದು. ಆಕೆಯ ಸಮಾಧಿ ಕೃಷ್ಣಾತೀರದ ತಂಗಡಗಿಯಲ್ಲಿದ್ದು, ಈಗಲೂ ಅಲ್ಲಿ ನೀಲಾಂಬಿಕೆಯ ಗುಡಿಯಿದೆ. ಒಟ್ಟಾರೆ, ಬಸವಣ್ಣನವರ ಮಹಾಮನೆಯಿಂದ ಅನುಭವಮಂಟಪದವರೆಗಿನ ಎಲ್ಲ ಕಾವ್ಯ ಕಲಾಪಗಳಲ್ಲಿ, ಕ್ರಿಯಾಶೀಲ ವ್ಯಕ್ತಿತ್ವವನ್ನು ಬೆಳಗುತ್ತ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಂಡು, ಆಧ್ಯಾತ್ಮಿಕ ಸಾಧನೆಗೈದ ನೀಲಾಂಬಿಕೆ ಕರ್ನಾಟಕದ ಸ್ತ್ರೀ ಪರಂಪರೆಯಲ್ಲಿಯೇ ಘನ ವ್ಯಕ್ತಿತ್ವವನ್ನು ಹೊಂದಿದ್ದಾಳೆ. ಉನ್ನತ ಮಟ್ಟದ ಸಾಧಕಿಯಾಗಿ, ವಿಚಾರಪತ್ನಿಯಾಗಿ, ಬೇಡಿದವರಿಗೆ ಬೇಡಿದ್ದನ್ನು ನೀಡುವ ಜಂಗಮಪ್ರೇಮಿಯಾಗಿ, ಕರ್ತವ್ಯವನ್ನು ಪಾಲಿಸಿಕೊಂಡು ಬಂದ ಕಾಯಕ ಜೀವಿಯಾಗಿ, ಅನುಭಾವದ ಔನ್ನತ್ಯವನ್ನು ಮೆರೆದ ಶ್ರೇಷ್ಠ ವಚನಕಾರ್ತಿಯಾಗಿ, ಜಗತ್ತಿಗೆ ನೀಡಿದ ಕೊಡುಗೆ ಅತ್ಯಮೂಲ್ಯವಾಗಿದೆ.

**ಕೊನೆಯ ಟಿಪ್ಪಣಿ:**

೧. ವೀರಣ್ಣ ರಾಜೂರ, (ಸಂ), ಶಿವಶರಣೆಯರ ವಚನ ಸಂಪುಟ-೫, ಪುಟ-೩೭೨
೨. ಎಂ.ಎಂ. ಕಲಬುರ್ಗಿ, ಮಾರ್ಗ-೧, ಪುಟ-೫೬